ದಿನಾಂಕಃ **31.05.2022**
ಅಸಲು ದಾವೆ ಸಂಖ್ಯೆಃ **97/2020**
ಪಿ.ಡಬ್ಲ್ಯೂಃ **1.**

<u>ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>

ಸಾಕ್ಷಿ ಅವರ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿ ಅದರಲ್ಲಿರುವ ಅಂಶಗಳನ್ನು ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇನೆಂದು ತಿಳಿಸಿರುತ್ತಾರೆ.

**<u>ಮುಖ್ಯ ವಿಚಾರಣೆ ಃ ವಾದಿಯ ಪರ ವಕೀಲರಾದ ಶ್ರೀ ಕೆ. ಎಸ್. ವಕೀಲರಿಂದ ಃ</u>**

ವಾದಿಯ ಜನನ ಪ್ರಮಾಣ ಪತ್ರವನ್ನು ಹಾಜರು ಮಾಡಿದ್ದು ಅದನ್ನು ನಿಪಿ 1 ಎಂದು, ನನ್ನ ಗಂಡನ ಮರಣ ಪ್ರಮಾಣ ಪತ್ರವನ್ನು ಹಾಜರು ಮಾಡಿದ್ದು ಅದನ್ನು ನಿಪಿ 2 ಎಂದು, ದಿಃ 16.05.2003 ರ ವಿಭಾಗ ಪತ್ರದ ದೃಢಿಕೃತ ನಕಲನ್ನು ಹಾಜರು ಮಾಡಿದ್ದು ಅದನ್ನು ನಿಪಿ 3 ಎಂದು, 3 ಆರ್.ಟಿ.ಸಿ ಗಳನ್ನು ಹಾಜರು ಮಾಡಿದ್ದು ಅವುಗಳನ್ನು ನಿಪಿ 4 ರಿಂದ 6 ಎಂದು, ಅಸೆಸ್‌ಮೆಂಟ್ ಎಕ್ಸ್ಟ್ರ್ಯಾಕ್ಟ್ ನ್ನು ನಿಪಿ 7 ಎಂದು, 6 ಫೋಟೋ ಮತ್ತು ಸಿಡಿಯನ್ನು ಹಾಜರು ಮಾಡಿದ್ದು ನಿಪಿ 8 ರಿಂದ 14 ಎಂದು ಗುರುತಿಸಲಾಯಿತು. 4 ಪುಟಗಳುಳ್ಳ ಆರ್ ಟಿ ಸಿ ಯನ್ನು ನಿಪಿ 15 ಎಂದು, 2 ಪುಟಗಳುಳ್ಳ ಆರ್ ಟಿ ಸಿ ಯನ್ನು ನಿಪಿ 16 ಎಂದು, 3 ಪುಟಗಳುಳ್ಳ ಆರ್ ಟಿ ಸಿ ಯನ್ನು ನಿಪಿ 17 ಎಂದು ಗುರುತಿಸಲಾಯಿತು.

ಆದ್ದರಿಂದ ದಾವೆಯನ್ನು ಡಿಕ್ರಿ ಮಾಡಬೇಕೆದು ಕೋರುತ್ತೇನೆ.

ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಲಾಯಿತು.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ. ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು,
ಮದ್ದೂರು.